ಕರ್ನಾಟಕ ಸರ್ಕಾರ
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯುತ್ತ ಸಂಸ್ಥೆ)
ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು – 560002.

ದೂರವಾಣಿ: 26700810, ಫ್ಯಾಕ್ಸ್: 26704342 ಇಮೇಲ್: director_bmcri@yahoo.co.in

ಸಂಖ್ಯೆ: ಬೆಂವೈವಿ/ಕಟ್ಟಡ/145/15-16

ನಿರ್ದೇಶಕರು ಹಾಗೂ ಡೀನ್‌ರವರ ಕಛೇರಿ
ಬೆಂಗಳೂರು, ದಿನಾಂಕ: 27-08-2015.

# ಪ್ರಕಟಣೆ

**ವಿಷಯ:** ಈ ಸಂಸ್ಥೆಯ ಆವರಣದಲ್ಲಿ ಶೇಖರಣೆಯಾಗಿರುವ / ದುರಸ್ಥಿಯಾಗದ (Unserviceable) ಪೀಠೋಪಕರಣ ಮತ್ತು ಇತರೆ ಸಾಮಗ್ರಿಗಳನ್ನು ವಿಲೇವಾರಿಗೊಳಿಸಲು ಪ್ರಕಟಣೆ ಹೊರಡಿಸುತ್ತಿರುವ ಬಗ್ಗೆ.

* * * * *

ಈ ಸಂಸ್ಥೆಯ ಆವರಣದಲ್ಲಿ ಶೇಖರಣೆಯಾಗಿರುವ ಅನುಪಯುಕ್ತ ಪೀಠೋಪಕರಣ ಮತ್ತು ಇತರೆ ಸಾಮಗ್ರಿಗಳನ್ನು ಯಥಾಸ್ಥಿತಿಯಲ್ಲಿ ಹೇಗಿದೆಯೋ ಹಾಗೆ ವಿಲೇವಾರಿಗೊಳಿಸಲಾಗುತ್ತಿದ್ದು ಆಸಕ್ತ ಗುತ್ತಿಗೆದಾರರು ಸದರಿ ಸಾಮಗ್ರಿಗಳನ್ನು ಕಛೇರಿ ದಿನಗಳಲ್ಲಿ / ವೇಳೆಯಲ್ಲಿ ಪರಿಶೀಲಿಸಬಹುದು. ಸದರಿ ಬಹಿರಂಗ cum sealed Tender ಮೂಲಕ ಹರಾಜನ್ನು ದಿನಾಂಕ: 09-09-2015 ರ ಅಪರಾಹ್ನ 4.00 ಘಂಟೆಗೆ ನಿರ್ದೇಶಕರ ಕೊಠಡಿಯಲ್ಲಿ ಏರ್ಪಡಿಸಲಾಗಿದೆ. ಆಸಕ್ತರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದು ಅಥವಾ ಮುಚ್ಚಿದ ಲಕೋಟೆಯನ್ನು ನಿರ್ದೇಶಕರ ಕಛೇರಿಗೆ ನಿಗದಿತ ಸಮಯ ಮತ್ತು ದಿನಾಂಕದೊಳಗೆ ಸಲ್ಲಿಸಬಹುದು. ಇತರೆ ಷರತ್ತುಗಳನ್ನು ಕಛೇರಿ ವೇಳೆಯಲ್ಲಿ BMCRI, Estate Officer ರವರಿಂದ ಪಡೆಯಬಹುದು ಅಥವಾ ಸೂಚನಾ ಫಲಕದಲ್ಲಿ ವೀಕ್ಷಿಸಬಹುದು. ಅಥವಾ www.bmcri.org website ನಲ್ಲಿ ಪಡೆಯಬಹುದು.

ಹರಾಜಿನಲ್ಲಿ ಭಾಗವಹಿಸುವ ಗುತ್ತಿಗೆದಾರರು ಈ ಕೆಳಗೆ ನಮೂದಿಸಿರುವ ಷರತ್ತಿನಂತೆ ಭಾಗವಹಿಸಬಹುದು. ಅತೀ ಹೆಚ್ಚು ಬಿಡ್‌ದಾರರು ಮೊತ್ತವನ್ನು ಸ್ಥಳದಲ್ಲೆ ಪಾವತಿಸತಕ್ಕದ್ದು.

**ನಿಬಂಧನೆಗಳು:**

1) ಆಸಕ್ತ ಬಿಡ್‌ದಾರರು ರೂ. 10000/- ಠೇವಣಿ ಇರಿಸತಕ್ಕದ್ದು (ಡಿ.ಡಿ ಯನ್ನು ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಇವರ ಹೆಸರಿಗೆ ಪಡೆಯುವುದು).
2) ಅತೀ ಹೆಚ್ಚು ಬಿಡ್‌ದಾರರಿಗೆ ಸಾಮಗ್ರಿಗಳನ್ನು ವಿಲೇವಾರಿ ನೀಡಲಾಗುವುದು.
3) ಅತೀ ಹೆಚ್ಚು ಬಿಡ್‌ದಾರರು ಸ್ಥಳದಲ್ಲಿಯೇ ಉಳಿಕೆ ಮೊತ್ತವನ್ನು ಪಾವತಿಸಿ ಸಾಮಗ್ರಿಗಳನ್ನು 2 ದಿನಗಳ ಒಳಗಾಗಿ ಸ್ವಂತ ಜವಾಬ್ದಾರಿಯಿಂದ ಮತ್ತು ಸಂಸ್ಥೆಯ ಕಟ್ಟಡಕ್ಕೆ / ಕಛೇರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಸಾಗಿಸತಕ್ಕದ್ದು. ತೊಂದರೆಯಾದ ಪಕ್ಷದಲ್ಲಿ ಬಿಡ್ ಗುತ್ತಿಗೆದಾರರೇ ದುರಸ್ಥಿಪಡಿಸಿಕೊಡತಕ್ಕದ್ದು.
4) ನಿಗದಿತ ದಿನದೊಳಗೆ ಸಾಗಿಸದೇ ಇದ್ದ ಪಕ್ಷದಲ್ಲಿ ಪಾವತಿಸಿರುವ ಮೊತ್ತವನ್ನು forefit ಮಾಡಿ ಸದರಿ ವಿಲೇವಾರಿ ಮಾಡುವ ಪ್ರಕ್ರಿಯೆಗೆ ಮರು ಪ್ರಕಟಣೆ ಹೊರಡಿಸಲಾಗುವುದು. ಬಿಡ್‌ದಾರರು ಯಾವುದೇ ನ್ಯಾಯಾಲಯದಲ್ಲಿ ಕಟ್ಲೆ ಹೂಡಲು ಅವಕಾಶವಿರುವುದಿಲ್ಲ (ಮುಚ್ಚಳಿಕೆ ಪತ್ರ ನೀಡುವುದು).
5) Tin / VAT Certificate ಸಲ್ಲಿಸುವುದು.
6) ಈ ಹರಾಜಿನ ಅಂತಿಮ ನಿರ್ಧಾರವು (ಅನುಮೋದಿಸುವ / ತಿರಸ್ಕರಿಸುವ) ಈ ಸಂಸ್ಥೆಯ ನಿರ್ದೇಶಕರದ್ದಾಗಿರುತ್ತದೆ. ಯಾವುದೇ ವಾದ ವಿವಾದಗಳಿಗೆ ಆಸ್ಪದವಿರುವುದಿಲ್ಲ.
7) ಹರಾಜಿನ ಅವಧಿ ಮುಗಿದ ಮೇಲೆ ಯಾವುದೇ ಮನವಿಯನ್ನು ಪರಿಗಣಿಸಲಾಗುವುದಿಲ್ಲ.

1/9/15

ನಿರ್ದೇಶಕರು ಮತ್ತು ಡೀನ್,
ಬೆಂಗಳೂರು ವೈದ್ಯಕೀಯ ಮಹಾ ವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ,
ಬೆಂಗಳೂರು.

**ಪ್ರತಿಯನ್ನು:**

ವೈದ್ಯಕೀಯ ಅಧೀಕ್ಷಕರು, ವಿಕ್ಟೋರಿಯಾ, ವಾಣಿವಿಲಾಸ, ಮಿಂಟೋ ಕಣ್ಣಾಸ್ಪತ್ರೆ ಮತ್ತು ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸತ್ರೆ ಇವರಿಗೆ ರವಾನಿಸುತಾ ಸದರಿ ಪ್ರಕಟಣೆಯನ್ನು ಸೂಚನಾ ಫಲಕಕ್ಕೆ ಲಗತ್ತಿಸಲು ಸೂಚಿಸಿದೆ.